**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 31.07.2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

1. ಆರೋಪಿ ಹೆಬ್ಬಾಳೆ ಯಲ್ಲಿ ವಾಸವಿರುತ್ತಾರೆ. ಆರೋಪಿ ನನಗೆ 2011 ರಿಂದ ಪರಿಚಯವಿರುತ್ತಾರೆ. ನನಗೆ ಮದುವೆಯಾುಗಿ 32 ವರುಷಗಳಾಗಿರುತ್ತದೆ. ಆರೋಪಿ ನನಗೆ ಪರಿಚಯಸ್ತರು ಸಂಬಂಧಿಕಾರಾಗಿರುವುದಿಲ್ಲ. ನನ್ನ ಹೆಂಡತಿ ಮೂಲತಃ ಭುವನಗಿರಿಯವರಾಗಿರುತ್ತಾರೆ. ನನ್ನ ಹೆಂಡತಿಯ ಅಣ್ಣ ತಮ್ಮಂದಿರು ಎಷ್ಟು ಜನ ಇರುತ್ತಾರೆ ಎಂದರೆ ಸಾಕ್ಷಿಯು ಇದು ಈ ಕೇಸಿಗೆ ಅವಶ್ಯಕತೆ ಇರುತ್ತದಾ ಎಂದು ನುಡಿದಿದ್ದು ಮುಂದುವರೆದು 5 ಜನ ಇರುತ್ತಾರೆ ಎಂದು ನುಡಿದಿರುತ್ತಾರೆ . ಸದರಿ ನನ್ನ ಹೆಂಡತಿಯ ಅಣ್ಣ ತಮ್ಮಂದಿರು ಕೃಷ್ಣಮೂರ್ತಿ , ಪ್ರಕಾಶ , ಲೋಕೇಶ , ಶೋಭಾ ನನ್ನ ಹೆಂಡತಿ ಮತ್ತು ಪುಷ್ಪಲತಾ ಆಗಿರುತ್ತಾರೆ.

2. ಸದರಿ ಆರೋಪಿ ನನ್ನ ಪತ್ನಿಯ ತಮ್ಮ ಆಗಿರುತ್ತಾರೆ ಎಂದರೆ ಸರಿ . ಸದರಿ ವಿಚಾರವನ್ನು ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ನಾನು 30 ವರುಷಗಳ ಹಿಂದೆ ಮದುವೆಯಾಗಿ ಆರೋಪಿ ನನ್ನ ಹೆಂಡತಿಯ ತಮ್ಮ ಎಂದು ತಿಳಿದಿತ್ತು . ನನ್ನ ಮದುವೆಯಾಗಿದ್ದಾಗಿನಿಂದಲೂ ನನ್ನ ಮತ್ತು ನನ್ನ ಹೆಂಡತಿಯ ಆರೋಪಿಯೊಂದಿಗೆ ಮಾತುಕತೆ ಚೆನ್ನಾಗಿ ಇರುತ್ತದೆ . ನಾನು ನನ್ನ ಮೌಖಿಕ ಮುಖ್ಯ ವಿಚಾರಣೆಯಲ್ಲಿ ಆರೋಪಿಗೆ ನನಗೆ ಪರಿಚಯಸ್ತರು ಎಂದು ತಿಳಿಸಿರುತ್ತೇನೆ. ಆರೋಪಿ ನನ್ನ ಭಾವ ಎಂದು

ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆವತ್ತು ಆ ವಿಚಾರ ನನಗೆ ಕೇಳಿರುವುದಿಲ್ಲ ಎಂದು ನುಡಿದರು .

3. ನಾನು ಚೀಟಿಯನ್ನು ಕೂಗುವ ಸಂದರ್ಭದಲ್ಲಿ ನನಗೆ ಸಂಬಂದಪಟ್ಟ ಚೆಕ್ ನ್ನು ಕೊಟ್ಟಿರುತ್ತೇನೆ. ನನಗೆ ಜಾಮೀನುದಾರರಾಗಿ ಯಾರು ಚೆಕ್ ನ್ನು ಕೊಟ್ಟಿರುವುದಿಲ್ಲ. ಚೀಟಿ ತೆಗೆದುಕೊಂಡ 20 ಜನಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಅದರಲ್ಲಿ ಕೆಲವ್ರೊಬ್ಬರ ಬಗ್ಗೆ ನನಗೆ ತಿಳಿದಿರುತ್ತದೆ. ಆರೋಪಿಯು 2 ನೆ ಚೀಟಿಯನ್ನು ತೆಗೆದುಕೊಂಡಿರುತ್ತಾರೆ. ಆ ದಿನ ರೂ 25,000/- ಕ್ಕೆ ಚೀಟಿ ಬಿಡ್ ಆಗಿರುತ್ತದೆ. ಆರೋಪಿ ಚೀಟಿ ಕೂಗಿದ ದಿನ ಒಂದು ಕೆನರಾ ಬ್ಯಾಂಕ್ ಚೆಕ್ ನ್ನು ನೀಡಿರುತ್ತಾರೆ. ಚೆಕ್ ನಂಬರ ನನಗೆ ತುಂಬಾ ವರುಷಗಳ ಆದ ಕಾರಣ ನನಗೆ ನೆನಪಿರುವುದಿಲ್ಲ.

4. ಆರೋಪಿಯು ಕಲಾವತಿಯವರಿಂದ ಚೆಕ್ ನ್ನು ವಾಪಸು ಪಡೆದುಕೊಂಡರಾ ಎಂದರೆ ಸಾಕ್ಷಿಯು ಕಲಾವತಿಯವರು ಆರೋಪಿಗೆ ಚೆಕ್ ನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದರು. ಆರೋಪಿ ಚೀಟ ತೆಗೆದುಕೊಳ್ಳುವ ಸಮಯಕ್ಕೆ ನಾನು ಜಾಮೀನುದಾರರಾಗಿರುವುದಿಲ್ಲ . ಭಾಗ್ಯರವರಿಗೂ ಚೀಟಿ ತೆಗೆದುಕೊಳ್ಳುವುದಕ್ಕೆ ನಾನು ಜಾಮೀನುದಾರರಾಗಿರುವುದಿಲ್ಲ. ಭಾಗ್ಯರವರು ಹರಳಹಳ್ಳಿಯಲ್ಲಿ ವಾಸವಿರುತ್ತಾರೆ. ಭಾಗ್ಯರವರು ನನ್ನ ಸಂಬಂಧಿಕರು ಇರುತ್ತಾರೆ. ಭಾಗ್ಯರವರು ರೂ 30, 000/- ಕ್ಕೆ ಬಿಡ್ ಮಾಡಿರುತ್ತಾರೆ. ಭಾಗ್ಯರವರು ರೂ 30,000/- ಕ್ಕೆ ಬಿಡ್ ಮಾಡಿದ್ದು ಅವರು ಉಳಿದ

ರೂ 70, 000/- ಪಡೆದುಕೊಂಡಿರುತ್ತಾರೆ. ನಾವು ಕಟ್ಟಿದಂತಹ ಚೀಟಿ ಏಜೆಂಟ್ ಆಗಿರುತ್ತದೆ. ಸದರಿ ಏಜೆಂಟ್ ಚೀಟಿ ರೂ 1 ಲಕ್ಕ್ ಕ್ಕೆ ಇರುತ್ತದೆ.

5. ಸಾಮಾನ್ಯವಾಗಿ ಏಜೆಂಟ್ ಚೀಟಿಯಲ್ಲಿ ಪೂರ್ತಿ ಹಣ ಸಿಗುವುದಿಲ್ಲ ಎಂದರೆ ಸಾಕ್ಷಿಯು ರೂ 5,000/- ಹಿಡಿದುಕೊಂಡು ರೂ 95,000/- ಕೊಡುತ್ತಾರೆ ಎಂದು ನುಡಿದರು. ನಾನು ಏಜೆಂಟ್ ಚೀಟಿಯಲಿಪ್ಲಿ ಹೇಳಿದ್ದೆ ನಿಜವಾದರೆ ಭಾಗ್ಯರವರು ರೂ 30000/- ಬಿಡ್ ಮಾಡಿ ರೂ 70,000/- ಪಡೆದುಕೊಂಡಿರುವುದು ಸುಳ್ಳು ಎಂದರೆ ಸಾಕ್ಷಿಯು ಅವರಿಗೆ ರೂ 70,000/- ಪೂರ್ತಿ ಹಣ ಕೊಟ್ಟಿರುತ್ತಾರೆ ಕೊನೆಯವರಿಗೆ ರೂ 5,000/- ಹಿಡಿದು ರೂ 95,000/- ಕೊಡುತ್ತಾರೆ ಎಂದು ನುಡಿದರು. ನಾನು ಮೇಲೆ ಹೇಳಿದ್ದು ಸರಿಯಿದ್ದಲ್ಲಿ ರೂ 1 ಲಕ್ಷ ದ ಪೈಕಿ ರೂ 95,000/- ಏಜೆಂಟ್ ಯಾವಾಗ ಪಡೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಅಂತ್ಯದ ಚೀಟಿಯಲ್ಲಿ ಕೊನೆಯವರು ಪಡೆದುಕೊಳ್ಳುತ್ತಾರೆ ಎಂದು ನುಡಿದರು. ಕೊನೆಯ ಚೀಟಿ ಬಿಡ್ ಆಗುವುದಿಲ್ಲ . ಕೊನೆಯ ಚೀಟಿಯಲ್ಲಿ ರೂ 5,000/- ಹಿಡಿದುಕೊಂಡು ರೂ 95,000/- ಕೊಡುತ್ತಾರೆ .

6. ಯಾವಾಗ ಪೂರ್ತಿ ರೂ 1 ಲಕ್ಷ ಹೋಗುತ್ತದೆ ಎಂದರೆ ಸಾಕ್ಷಿಯು ಸೋಡಿ ಹಣ ರೂ 1 ಲಕ್ಷ ಆದಾಗ ಪೂರ್ತಿ ಹಣ ಹೋಗುತ್ತದೆ ಎಂದು ನುಡಿದರು. ಸದರಿ ಚೀಟಿ ಸುಮಾರು 14 ತಿಂಗಳ ಚೀಟಿಯಾಗಿರುತ್ತದೆ. ಕೊನೆಯ ಚೀಟಿಯನ್ನು ಕುಮಾರಿಯವರು ಪಡೆದುಕೊಂಡಿರುತ್ತಾರೆ .ಸದರಿ ಕುಮಾರಿಯವರು ಹೆಬ್ಬಾಲೆ ಗ್ರಾಮದವರು ಆಗಿರುತ್ತಾರೆ.

ಭಾಗ್ಯರವರು ಅವರ ಗಂಡನಿಗೆ ಹುಷಾರಿಲ್ಲದ ಕಾರಣ ಸುಮಾರು 6 ಚೀಟಿ ಅವರು ಕಟ್ಟಿರುವುದಿಲ್ಲ ಅದನ್ನು ಬಾಕಿ ಉಳಿಸಿಕೊಂಡಿರುತ್ತಾರೆ. ಭಾಗ್ಯರವರು ಕೊನೆಯ 6 ಚೀಟಿಯನ್ನು ಕಟ್ಟಿರುವುದಿಲ್ಲ. ಭಾಗ್ಯರವರು ಸದರಿ ಚೀಟಿ ಹಣವನ್ನು ಹಿಂತುಗಿಸಿದ ಬಗ್ಗೆ ನಿಮಗೆ ಏನಾದರೂ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಭಾಗ್ಯರವರು ನನ್ನ ಬಳಿ ಕಲಾವತಿಯವರು ದುಬಾರಿ ಬಡ್ಡಿ ಹಾಕಿ ಚೀಟಿ ಹಣವನ್ನು ಹಿಂತಿರುಗಿಸಲು ಕೇಳುತ್ತಿದ್ದ ಬಗ್ಗೆ ನನಗೆ ತಿಳಿದಿದೆ ಎಂದು ನುಡಿದರು.

7. ಮೇಲೆ ಹೇಳಿದಂತೆ ಭಾಗ್ಯರವರು ಯಾವ ವರ್ಷ , ಯಾವ ತಿಂಗಳು ಮತ್ತು ಯಾವ ದಿನದಂದು ಚೀಟಿ ಹಣ ಕೊಡಲು ಹೋಗಿದ್ದರು ಎಂದರೆ ಸಾಕ್ಷಿಯು 2012-13 ರಲ್ಲಿ ಕೊಡಲು ಹೋಗಿದ್ದರು ಎಂದು ನುಡಿದರು. ನಾನು ಭಾಗ್ಯರವರ ಜೊತೆ ಹೋಗಿರುವುದಿಲ್ಲ ಆದರೆ ವಿಚಾರವನ್ನು ನನಗೆ ತಿಳಿಸಿದ್ದರು. ಭಾಗ್ಯರವರು ಪಡೆದುಕೊಂಡ ಚೀಟಿಗೆ ಆರೋಪಿಗೆ ಚೆಕ್ ನ್ನು ಕೊಟ್ಟಿರುವುದಾಗಿ ತಿಳಿಸಿದ್ದು ಅದು ಯಾವ ಬ್ಯಾಂಕಿನ ಚೆಕ್ ಎಂದರೆ ಸಾಕ್ಷಿಯು ಕೆನರಾ ಬ್ಯಾಂಕಿನ ಚೆಕ್ ಎಂದು ನುಡಿದರು. ತುಂಬಾ ವರ್ಷಗಳಾಗಿವುದರಿಂದ ಚೆಕ್ ನ ಮೇಲೆ ಬರೆದಿರುವ ಒಕ್ಕಣೆಗಳ ಬಗ್ಗೆ ನನಗೆ ನೆನಪಿಲ್ಲ. ಆರೋಪಿ ಚೆಕ್ ನ್ನು ಕೊಡುವ ಸಮಯಕ್ಕೆ ನಾನು ಅಲ್ಲಿ ಇದ್ದೆನಾ ಎಂದರೆ ಸಾಕ್ಷಿಯು ನಾನು ಅಲ್ಲಿ ಉಪಸ್ತಿತನಿದ್ದೆ ಚೀಟಿ ಕೂಗಿದಾಗಲೆ ಚೆಕ್ ನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದರು.

8. ಚೀಟಿ ಕೂಗಿದಾಗಲೆ ಹಣವನ್ನು ಪಡೆದುಕೊಂಡು ಚೆಕ್ ನ್ನು ಅಲ್ಲೆ ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದರು. ಬಾಗ್ಯರವರು ಚೀಟಿ ಕೂಗಿದಾಗ

ಆರೋಪಿಯನ್ನು ಚೆಕ್ ಕೊಟ್ಟರಾ ಎಂದರೆ ಸಾಕ್ಷಿಯು ಮೊದಲೆ ಆರೋಪಿಯವರ ಚೆಕ್ ಕಲಾವತಿ ಬಳಿ ಇದ್ದು ಅದೆ ಚೆಕ್ ನ ಮೇಲೆ ಜಾಮೀನಿಗಾಗಿ ನನ್ನ ಬಳಿ ಇರುವ ಚೆಕ್ ನ್ನು ಬಳಿಸಿಕೊಳ್ಳಿ ಎಂದು ಹೇಳಿದ್ದು ಅದಕ್ಕೆ ಆರೋಪಿಯು ಬುಕ್ ಗೆ ಸಹಿ ಹಾಕಿರುತ್ತಾರೆ ಎಂದು ನುಡಿದರು. ನಾನು ಮೇಲೆ ಹೇಳಿದಾಗೆ ಭಾಗ್ಯರವರು 5 ನೆ ಚೇಟಿ ಕೂಗಿದಾಗ ಭಾಗ್ಯರವರ ಚೆಕ್ ಆಗಲಿ ಆರೋಪಿಯವರ ಚೆಕ್ ಆಗಲಿ ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಭಾಗ್ಯರವರ ಬಳಿ ಬ್ಯಾಂಕ್ ಖಾತೆ ಇರುವುದಿಲ್ಲ ಆ ಸಮಯದಲ್ಲಿ ಆರೋಪಿಗೆ ಸಂಬಂದಪಟ್ಟ ಚೆಕ್ ಕೊಟ್ಟಿರುವುದಿಲ್ಲ ಎಂದು ನುಡಿದರು.

9. ಆರೋಪಿ ಕೊಟ್ಟ ಚೆಕ್ ಮೇಲೆ ಯಾವುದೆ ರೀತಿ ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ ಸಹಿ ಮಾತ್ರ ಹಾಕಿದ್ದರು . ನಾನು ಚೀಟಿ ಕಟ್ಟುತ್ತಿದ್ದೆ ಎಂದು ತೋರಿಸಲು ಯಾವುದಾದರು ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ನನ್ನ ಬಳಿ ಯಾವುದೆ ದಾಖಲಾತಿ ಇರುವುದಿಲ್ಲ ಕಲಾವತಿರವರು ಇಟ್ಟುಕೊಂಡಿದ್ದ ಪುಸ್ತಕದಲ್ಲಿ ಅವರು ನಮೂದಿಸಿಕೊಂಡಿದ್ದರು ಎಂದು ನುಡಿದರು. ಚೀಟಿ ಸಂಬಂದಪಟ್ಟ ಹಣವನ್ನು ಕಲಾವತಿರವರ ಖಾತೆಗೆ ಹಾಕುತ್ತಿರುವುದಿಲ್ಲ ಅಲ್ಲಿಯೇ ಕೊಡುತ್ತಿದ್ದೆವು . 20 ಜನ ಚೀಟಿ ಕಟ್ಟುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲಾತಿಗಳು ಇರುವುದಿಲ್ಲ ಸಾಕ್ಷಿಯು ಮುಂದುವರೆದು ಕಲಾವತಿರವರು ಇಟ್ಟುಕೊಂಡಿದ್ದ ಪುಸ್ತಕದಲ್ಲಿ ಅವರು ನಮೂದಿಸಿಕೊಂಡಿದ್ದರು ಎಂದು ನುಡಿದರು. ಭಾಗ್ಯರವರು ನಮ್ಮ ಮನೆಗೆ ಬಂದು ರೂ 30,000/- ಬಾಕಿ ಹಣ ಕೊಡಲು ಹೋಗಿದ್ದೆ ಎಂದು ತಿಳಿಸಿದ್ದರು.

10. ಆರೋಪಿಯಿಂದಾಗಲಿ ಅಥವಾ ಭಾಗ್ಯರವರಿಂದಾಗಲಿ ಕಲಾವತಿಯವರು ಚೆಕ್ ನ್ನು ಹಿಂತಿರುಗಿಸುತ್ತಿಲ್ಲ ಎಂದು ಪೋಲಿಸ್ ಠಾಣೆಯಲ್ಲಿ ಪುಕಾರನ್ನು ನೀಡಿದ್ದಿರಾ ಎಂದರೆ ಸಾಕ್ಷಿಯು ಸದರಿ ವಿಚಾರವನ್ನು ಬ್ಯಾಂಕ್ ಗೆ ಪುಕಾರು ನೀಡುವುದಾಗಿ ನಾನು ಆರೋಪಿಗೆ ತಿಳಿಸಿರುತ್ತೇನೆ ಎಂದು ನುಡಿದರು. ಪೋಲಿಸ್ ಠಾಣೆಗೆ ದೂರನ್ನು ನೀಡುವುದಕ್ಕೆ ನಾನು ತಿಳಿಸಿರುವುದಿಲ್ಲ.

**ಮುಂದುವರೆದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ